

**ದಾವಣಗೆರೆಯ ಡಾ. ರಾಘವನ್ ಗುನ್ನಿ ಅವರಿಂದ ಕಾರ್ಮಿಕರಿಗೆ ಕೋವಿಡ್ ಜಾಗೃತಿ.**

ಪರದಾಡುವಂಥ ಕೆಟ್ಟ ಪರಿಸ್ಥಿತಿಗೆ ತಂದು ನಿಲ್ಲಿಸಿತ್ತು. ಕೈಗಾರಿಕೆ, ಕೃಷಿ, ಬ್ಯಾಂಕ್, ಪ್ರವಾಸೋದ್ಯಮ ಸೇರಿದಂತೆ ಇತರೆ ಸಹಕಾರಿ ಕ್ಷೇತ್ರಗಳ ಆರ್ಥಿಕ ವ್ಯವಸ್ಥೆಯನ್ನೇ ಬುಡಮೇಲು ಮಾಡಿದ್ದಲ್ಲದೆ, ಆರ್ಥಿಕವಾಗಿ ಚೇತರಿಸಿಕೊಳ್ಳದಂತೆ ಅಡಕತ್ತರಿಗೆ ಸಿಲುಕಿಸಿದೆ ಈ ಕೊರೊನಾ" ಎಂದು ಗ್ರಾಸಿಂ ಘಟಕದ ಮುಖ್ಯಸ್ಥ ಅಜಯ್‌ಕುಮಾರ್ ಗುಪ್ತಾ ಹೇಳುತ್ತಾರೆ.

"ಕೋವಿಡ್ ನಿಯಂತ್ರಣಕ್ಕೆ ಬಾರದೆ ದಿನದಿಂದ ದಿನಕ್ಕೆ ಮತ್ತಷ್ಟು ವಿಕಸನಗೊಳ್ಳುತ್ತಿದೆ. ಇದರಿಂದಾಗಿ ಇಡೀ ವಿಶ್ವವೇ ಜಾಗತಿಕ ಬಿಕ್ಕಟ್ಟಿನತ್ತ ಸಾಗಿದರೆ, ಇನ್ನು ಸಾಮಾನ್ಯ ಜನರ ಪಾಡು ಹೇಳತೀರದು. ಕೊರೊನಾ ದೊಡ್ಡ ಸವಾಲಾಗಿ ನಮ್ಮ ಮುಂದೆ ಹೆಮ್ಮರವಾಗಿ ನಿಂತಿದೆ. ದೇಶವನ್ನು ಸಂರಕ್ಷಿಸುವ ನಿಟ್ಟಿನಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರ ಹಾಗೂ ಜಿಲ್ಲಾಡಳಿತ ದಿಟ್ಟ ನಿರ್ಧಾರ ತೆಗೆದುಕೊಂಡಿದ್ದಲ್ಲದೆ ಹಗಲಿರುಳು ಶ್ರಮಿಸುತ್ತಿವೆ. ನಮ್ಮ ಕಂಪನಿ ಕೂಡ ಕಾರ್ಯಾಚರಣೆ ಸ್ಥಗಿತಗೊಳಿಸಿ ಸಮಾಜದ ಸ್ವಾಸ್ಥ್ಯ ಕಾಪಾಡುವ ನಿಟ್ಟಿನಲ್ಲಿ ದಿಟ್ಟತನ ತೋರಿದೆ" ಎಂದು ಗ್ರಾಸಿಂ ಜನಸಂಪರ್ಕ ವಿಭಾಗದ ಮುಖ್ಯಸ್ಥ ಪಿ. ಶ್ರೀನಿವಾಸ್ ಹೇಳುತ್ತಾರೆ.

ಕಂಪನಿ ಮುಖ್ಯಸ್ಥರು ನೇಮಿಸಿದ ಕೋವಿಡ್ ಜಾಗೃತಿ ಸಮಿತಿ ಹಾಗೂ ಉಪ ಸಮಿತಿಯ ಎಲ್ಲ ಪದಾಧಿಕಾರಿಗಳು ಸಮರ್ಥವಾಗಿ ಕಾರ್ಯನಿರ್ವಹಿಸಿದ್ದಾರೆ. ಕಂಪನಿಯ ಎಚ್‌ಪಿಎಫ್ ಹಾಗೂ ಜಿಆರ್‌ಡಿ ಕಾರ್ಮಿಕ ಸಂಘಟನೆಗಳ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಹಾಗೂ ಎಲ್ಲ ಕಾರ್ಮಿಕರು ಆರೋಗ್ಯ ಮತ್ತು ಸುರಕ್ಷತೆ ದೃಷ್ಟಿಯಿಂದ ಒಮ್ಮತದಿಂದ ಸೋಂಕಿನ ವಿರುದ್ಧ ಹೋರಾಡುವ ಪಣ ತೊಟ್ಟಿದ್ದಾರೆ ಎಂದು ಶ್ರೀನಿವಾಸ್ ಹೇಳಿದರು.

*** ಕಂಪನಿ ಕೈಗೊಂಡಿರುವ ಕೋವಿಡ್ ನಿಯಂತ್ರಣ ಕಾರ್ಯಕ್ರಮಗಳು:**

ಲಾಕ್‌ಡೌನ್ ಸಮಯದಲ್ಲಿ ಮಾರ್ಚ್‌ನಿಂದ ಜೂನ್‌ವರೆಗೂ ಬಡವರಿಗೆ ಹಾಗೂ ಕೋವಿಡ್ ಸೇನಾನಿಗಳಿಗೆ 10 ಸಾವಿರ ಊಟ, ಸರ್ಕಾರಿ ಕಚೇರಿ, ಗ್ರಾ.ಪಂ ಸದಸ್ಯರು, ಆರಕ್ಷಕ ಸಿಬ್ಬಂದಿ, ಪತ್ರಕರ್ತರು, ಆರೋಗ್ಯ ಇಲಾಖೆ, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ 2500 ಮಾಸ್ಕ್ ಹಾಗೂ ಸ್ಯಾನಿಟೈಸರ್ ಪೂರೈಸಲಾಗಿದೆ. ಇದಲ್ಲದೆ 10 ಲಕ್ಷ ವೆಚ್ಚದಲ್ಲಿ ಹಾವೇರಿ ಜಿಲ್ಲಾಧಿಕಾರಿಗಳ ಮೂಲಕ 1000, ಹರಿಹರ ನಗರದ ತಹಶೀಲ್ದಾರ್ ಅವರಿಗೆ 100, ರಾಣೆಬೆನ್ನೂರು ತಾಲ್ಲೂಕ ತಹಶೀಲ್ದಾರ್ ಅವರಿಗೆ 100 ಹಾಗೂ ಜನಸೇವಾ ಟ್ರಸ್ಟ್ ಮೂಲಕ 500 ಆಹಾರದ ಕಿಟ್‌ಗಳನ್ನು ವಲಸೆ ಕಾರ್ಮಿಕರು ಹಾಗೂ ಬಡವರಿಗೆ ವಿತರಿಸಲಾಗಿದೆ. ಸ್ಥಳೀಯ ನಾಲ್ಕು ಗ್ರಾಮ ಪಂಚಾಯ್ತಿಗಳಿಗೆ ಹ್ಯಾಂಡ್ ಸ್ಯಾನಿಟೈಸರ್ ನೀಡಲಾಗಿದೆ ಗ್ರಾಸಿಂ ಜನಸೇವಾ ಟ್ರಸ್ಟಿನ ವ್ಯವಸ್ಥಾಪಕ ದಿನೇಶ ನಾಯ್ಕ್ ವಿವರಿಸಿದರು.

ಗ್ರಾಸಿಂ ಜನಸೇವಾ ಟ್ರಸ್ಟ್ ಮೂಲಕ ಟೈಲರಿಂಗ್ ತರಬೇತಿ ಪಡೆದ ಮಹಿಳೆಯರಿಂದ 1 ಲಕ್ಷ ವೆಚ್ಚದಲ್ಲಿ 10 ಸಾವಿರ ಮಾಸ್ಕ್ ಸಿದ್ಧಪಡಿಸಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಿಮಿತ್ತ ವಿದ್ಯಾರ್ಥಿಗಳಿಗೆ ಜಿಲ್ಲಾಧಿಕಾರಿಗಳ ಮೂಲಕ ಸಾರ್ವಜನಿಕ ಶಿಕ್ಷಣ ಇಲಾಖೆ ಹಾವೇರಿ ಇವರಿಗೆ ನೀಡಲಾಯಿತು. ಕವಲೆತ್ತು ಗ್ರಾಮದ ಬಿಎಜೆಎಸ್‌ಎಸ್ ದುರ್ಗಾಮಾತಾ ಪ್ರೌಢಶಾಲೆಯಲ್ಲಿ ಸ್ಥಾಪಿಸಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಕ್ಕೆ ಮಾಸ್ಕ್ ಹಾಗೂ ಸ್ಯಾನಿಟೈಸರ್ ನೀಡಿದ್ದಲ್ಲದೆ ಕೇಂದ್ರವನ್ನು ಕ್ರಿಮಿನಾಶಕ ಸಿಂಪಡಿಸಿ ಶುಚಿಗೊಳಿಸಲಾಯಿತು.

ಕಂಪನಿ ಕಾರ್ಮಿಕರಿಗೂ ಹಾಗೂ ಕಾಲೊನಿ ನಿವಾಸಿಗಳಿಗೆ ದಾವಣಗೆರೆಯ ನುರಿತ ವೈದ್ಯರಾದ ಡಾ. ರಾಘವನ್ ಗುನ್ನಿ ಅವರಿಂದ ಎರಡು ಮೂರು ಸುತ್ತಿನಲ್ಲಿ ಕೊರೊನಾ ಸೋಂಕಿನ ಬಗ್ಗೆ ಜಾಗೃತಿ. ಕೊಳೆಗೇರಿಗಳಲ್ಲಿ ವಾಸಿಸುವ ಜನರಿಗೆ ಬಟ್ಟೆ, ರಗ್ಗು ವಿತರಿಸಲಾಯಿತು. ಇದರ ಜೊತೆಗೆ ವರ್ಷಕ್ಕೊಮ್ಮೆ ವಿಕ್ರಮ್ ಬಿರ್ಲಾಜಿಯವರ ಜನ್ಮದಿನದ ಅಂಗವಾಗಿ ಕೃತಕ ಕಾಲು ಜೋಡಣೆ ಶಿಬಿರ, ಹಳ್ಳಿ-ಹಳ್ಳಿಗೂ ಆರೋಗ್ಯ ಸೇವೆ, ಯುವಕ-ಯುವತಿಯರಿಗೆ ಕಂಪ್ಯೂಟರ್, ಟೈಲರಿಂಗ್ ಸ್ವ-ಉದ್ಯೋಗ ತರಬೇತಿ, ರೈತರಿಗೆ ಮಾರ್ಗದರ್ಶನ ಶಿಬಿರಗಳು, ಸಸಿ ನೆಡುವಿಕೆ, ಶಾಲಾ ಕೊಠಡಿಗಳ ದುರಸ್ತಿ, ಅಗತ್ಯ ಮೂಲ ಸೌಲಭ್ಯಗಳ ಒದಗಿಸಲಾಗಿದೆ ಎಂದು ಘಟಕದ ಮುಖ್ಯಸ್ಥ ಅಜಯ್‌ಕುಮಾರ್ ಗುಪ್ತಾ ತಿಳಿಸಿದರು.

✦✦✦



**ರಾಣೆಬೆನ್ನೂರು ನಗರದಲ್ಲಿ ಬಡವರಿಗೆ ಆಹಾರದ ಕಿಟ್ ವಿತರಿಸಿದ ಸಂದರ್ಭ. ತಹಶೀಲ್ದಾರ್ ಬಸವನಗೌಡ ಕೋಟೂರ, ಪಿ. ಶ್ರೀನಿವಾಸ್, ದಿನೇಶ್ ನಾಯ್ಕ್, ಮಂಜಪ್ಪ ಇದ್ದಾರೆ.**

## ಸಮಾಜಮುಖಿ ಕಾರ್ಯ: ಶ್ಲಾಘನೆ

ಗ್ರಾಸಿಂ ಕಂಪನಿಯ ಪದಾಧಿಕಾರಿಗಳು ಹರಿಹರ ನಗರದ ಆಯ್ದ ಜನನಿಬಿಡ ಪ್ರದೇಶಗಳಲ್ಲಿ ಕೊರೊನಾ ಸೇರಿದಂತೆ ಇತರೆ ಸಾಂಕ್ರಾಮಿಕ ರೋಗಗಳು ಹತ್ತಿರ ಸುಳಿಯದಿರಲೆಂದು ಅವರೇ ಮುಂದೆ ಬಂದು ಹೈಪೋ ಕ್ರಿಮಿನಾಶಕವನ್ನು ಸಿಂಪಡಿಸುವ ಮೂಲಕ ಸಮಾಜಮುಖಿ ಕಾರ್ಯಕ್ಕೆ ಕೈಜೋಡಿಸಿರುವುದು ಸ್ವಾಗತಾರ್ಹ. ಜನರ ಸಂಕಷ್ಟಗಳಿಗೆ ಸ್ಪಂದಿಸಲು ಮುಂದಾಗಿದ್ದಾರೆ.

– **ರಾಮಚಂದ್ರಪ್ಪ, ತಹಶೀಲ್ದಾರ್,** ಹರಿಹರ

## ಇತರೆ ಕಂಪನಿಗಳಿಗೆ ಮಾದರಿ

ಗ್ರಾಸಿಂ ಕಂಪನಿ ಲಾಕ್‌ಡೌನ್‌ನಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಸಾಮಾನ್ಯ ಜನರು, ಬಡವರು ಹಾಗೂ ಶ್ರಮಿಕರ ಕಷ್ಟಗಳಲ್ಲಿ ಭಾಗಿಯಾಗಿದೆ. ಕಂಪನಿ ತನ್ನ ಆರೋಗ್ಯ ಸೇವೆಯ ಜೊತೆಗೆ ಇದರ ವ್ಯಾಪ್ತಿಯಲ್ಲಿ ಬರುವ ಜನಸಂದಣಿ ಪ್ರದೇಶ ಹಾಗೂ ಹಳ್ಳಿಗಳಲ್ಲಿ ಸಾವಿರಾರು ಲೀಟರ್ ವೈರಾಣು ನಾಶಕ ಸಿಂಪಡಿಸಿದ್ದಾರೆ. ಲಾಕ್‌ಡೌನ್ ಸಮಯದಲ್ಲಿ ಹಸಿದವರಿಗೆ ಒಪ್ಪತ್ತಿನ ಊಟ ಒದಗಿಸುವ ಮೂಲಕ ಸಾಮಾಜಿಕ ಕಳಕಳಿ ತೋರುವ ಮೂಲಕ ಇತರೆ ಕಂಪನಿಗಳಿಗೆ ಮಾದರಿಯಾಗಿದೆ.

– **ಶ್ರೀ ಅರುಣಕುಮಾರ ಪೂಜಾರ,** ಶಾಸಕರು, ರಾಣೆಬೆನ್ನೂರು



**ಕೋವಿಡ್ ಜಾಗೃತಿ ಸಮಿತಿಯ ಪಿ.ಶ್ರೀನಿವಾಸ್, ದಿನೇಶ್ ನಾಯ್ಕ್, ಎಸ್.ಎಚ್.ಪ್ರಕಾಶ್, ಉಮಾಕಾಂತ್ ಪುಲರಿ, ಎಸ್.ಜಿ.ಭಟ್, ಬದ್ರಿನಾಥ್, ಮಂಜಪ್ಪ ಹಾಗೂ ಸಂತೋಷ್ ಶೆಟ್ಟಿ ಇದ್ದಾರೆ.**

Advertorial